3	BANGALORE (N)	1464698490	1768254280	2769025649
4	BANGALORE (S)	2329695423	2189035131	3418855327
5	GANDHINAGAR	688879296	845544290	802959228
6	JAYANAGAR	685749212	703731066	728630471
7	KENGERI	1750965274	2204364093	2992568002
8	K.R.PUR	1774297159	2431630526	2772649357
9	RAJAJINAGAR	593056848	617269875	655898782
10	SRIRAM PUR	258174288	304563490	286580042
11	SHIVAJI NAGAR	1249072211	1445543832	1492059895
12	YELAHANKA	889553439	1162105442	1841821927
13	ADD D.R.OFFICE (B.D.A)	354445074	314463157	226357333
	TOTAL	**13108262968**	**15450345386**	**19776058812**

1348(1646) ಶ್ರೀ ಮಲ್ಲಿಕಾರ್ಜುನ್ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ):– ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಅರಣ್ಯ ಇಲಾಖೆಯಲ್ಲಿ ಇರುವ ಡಿ.ಸಿ.ಎಫ್., ಎ.ಸಿ.ಎಫ್., ಮತ್ತು ಆರ್.ಎಫ್.ಓ ಹುದ್ದೆಗಳ ಸಂಖ್ಯೆ ಎಷ್ಟು;

ಆ) ಈ ಪೈಕಿ ಭರ್ತಿಯಾಗಿರುವ ಹುದ್ದೆಗಳ ಸಂಖ್ಯೆ ಎಷ್ಟು; ಮತ್ತು ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; ಇವರುಗಳು ಹಾಲಿ ಕಾರ್ಯನಿರ್ವಹಿಸುತ್ತಿರುವ ಸ್ಥಳ, ಪದನಾಮ ಮುಂತಾದ ವಿವರಗಳನ್ನು ಹುದ್ದೆವಾರು ಒದಗಿಸುವುದು;

ಇ) ಈ ಅಧಿಕಾರಿಗಳ ಪೈಕಿ ಕಳೆದ ಮೂರು ವರ್ಷಗಳಿಂದ ಯಾರ ಯಾರ ಮೇಲೆ ಯಾವ ಯಾವ ದೂರುಗಳು, ಇಲಾಖಾ ವಿಚಾರಣೆಗಳು, ಸಿ.ಓ.ಡಿ ಮತ್ತು ಲೋಕಾಯುಕ್ತ ವಿಚಾರಣೆಗಳು ಬಾಕಿ ಇವೆ (ವಿವರ ನೀಡುವುದು);

ಈ) ಈ ಪೈಕಿ ಎಷ್ಟು ಜನರ ಮೇಲೆ ಕ್ರಮ ಕೈಗೊಳ್ಳಲು ಉದ್ದೇಶಿಸಲಾಗಿದೆ;

ಇ) ಈ ಪೈಕಿ ಎಷ್ಟು ಜನರನ್ನು ವಿಚಾರಣೆಯಿಂದ ಕೈಬಿಡಲಾಗಿದೆ ಮತ್ತು ಎಷ್ಟು ಜನರಿಗೆ ಬಡ್ತಿ ನೀಡಲಾಗಿದೆ (ಹೆಸರು ಮತ್ತು ಪೂರ್ಣ ವಿವರಗಳನ್ನು ಒದಗಿಸುವುದು)?

ಶ್ರೀ ಚನ್ನಿಗಪ್ಪ (ಅರಣ್ಯ ಪರಿಸರ ಮತ್ತು ಜೀವಿ ಶಾಸ್ತ್ರ ಇಲಾಖೆ ಸಚಿವರು):

ಅ) ಅರಣ್ಯ ಇಲಾಖೆಯಲ್ಲಿರುವ ಡಿ.ಸಿ.ಎಫ್, ಎ.ಸಿ.ಎಫ್ ಮತ್ತು ಆರ್.ಎಫ್.ಓ.ಗಳ ಸಂಖ್ಯೆ ಕೆಳಕಂಡಂತಿದೆ.

ಡಿ. ಸಿ. ಎಫ್ (IFS)	55
ಡಿ. ಸಿ. ಎಫ್ (SFS)	40
ಎ. ಸಿ. ಎಫ್	191
ವಲಯ ಅರಣ್ಯಾಧಿಕಾರಿ (RFO)	630

ಆ) ಭರ್ತಿಯಾಗಿರುವ ಹುದ್ದೆಗಳ ಸಂಖ್ಯೆ ಮತ್ತು ಖಾಲಿ ಹುದ್ದೆಗಳ ಸಂಖ್ಯೆಯನ್ನು ಈ ಕೆಳಗೆ ನಮೂದಿಸಿದೆ. ಭರ್ತಿಯಾಗಿರುವ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿಗಳ/ ಸಿಬ್ಬಂದಿಯ ಹೆಸರು ಮತ್ತು ವಿವರಗಳನ್ನು ಪ್ರತ್ಯೇಕವಾಗಿ ಅನುಬಂಧ–1 ರಲ್ಲಿ ಲಗತ್ತಿಸಿದೆ.

ವೃಂದದ ಹೆಸರು	ಭರ್ತಿಯಾಗಿರುವ ಹುದ್ದೆಗಳು	ಖಾಲಿ ಹುದ್ದೆಗಳು
ಐ.ಎಫ್.ಎಸ್.	53	2
ಡಿ.ಸಿ.ಎಫ್ ಎಸ್. ಎಫ್.ಎಸ್.	34	6

ಎ.ಸಿ.ಎಫ್.	184	7
ವಲಯ ಅರಣ್ಯಾಧಿಕಾರಿ	602	28

ಇ) ಈ ಅಧಿಕಾರಗಳ ಪೈಕಿ ಕಳೆದ ಮೂರು ವರ್ಷಗಳಿಂದ ದೂರುಗಳು, ಇಲಾಖಾ ವಿಚಾರಣೆಗಳು, ಸಿ.ಓ.ಡಿ ಮತ್ತು ಲೋಕಾಯುಕ್ತ ವಿಚಾರಣೆಗಳು ಬಾಕಿ ಇರುವ ಪ್ರಕರಣಗಳ ಸಂಖ್ಯೆ ಈ ಕೆಳಕಂಡಂತಿದ್ದು, ಅಧಿಕಾರಿಗಳ/ನಾವಕರರ ಹೆಸರುಗಳನ್ನು ಪಟ್ಟಿ ಮಾಡಿ ಪ್ರತ್ಯೇಕವಾಗಿ ಅನುಬಂಧ–2 ರಲ್ಲಿ ಸಿಗುತ್ತದೆ.

ವೃಂದ	ಇಲಾಖಾ ವಿಚಾರಣೆ	ಬಾಕಿ ಇರುವ ಸಿ.ಓ.ಡಿ ತನಿಖೆ	ಲೋಕಾಯುಕ್ತ ವಿಚಾರಣೆ
ಡಿ.ಸಿ.ಎಫ್	7	–	–
ಎ.ಸಿ.ಎಫ್	24	–	2
ವ.ಅ.ಅ	62	–	4

ಈ) ಇಲಾಖಾ ವಿಚಾರಣೆ ಬಾಕಿ ಇರುವ ಎಲ್ಲಾ ಅಧಿಕಾರಿ / ನೌಕರರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ಸಿಸಿಎ) ನಿಯಮಗಳನುಸಾರ ಶಿಸ್ತುಕ್ರಮ ಜರುಗಿಸಲಾಗುತ್ತಿದೆ.

ಉ) ಇಲಾಖಾ ವಿಚಾರಣೆಯಲ್ಲಿ ಆರೋಪ ಸಾಬೀತಾಗದೇ ಇರುವ 22 ಅಧಿಕಾರಿಗಳನ್ನು ವಿಚಾರಣೆಯಿಂದ ಕೈಬಿಟ್ಟಿದ್ದು, ಅವರ ವಿವರಗಳನ್ನು ಅನುಬಂಧ –3 ರಲ್ಲಿ ಪ್ರತ್ಯೇಕವಾಗಿ ಲಗತ್ತಿಸಿ ಸಲ್ಲಿಸಿದೆ. ಇಲಾಖಾ ವಿಚಾರಣೆ ಬಾಕಿ ಇರುವ ಯಾವುದೇ ಅಧಿಕಾರಿಗೆ ಬಡ್ತಿ ನೀಡಿರುವುದಿಲ್ಲ.

1349 (1647) ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬಾ (ಬಸವಕಲ್ಯಾಣ):– ಮಾನ್ಯ ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಸಂಸ್ಥೆಯವರು ಕಳೆದ 3 ವರ್ಷಗಳಲ್ಲಿ ಕೈಗಾರಿಕಾ ಉದ್ದೇಶಗಳಿಗಾಗಿ ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಭೂಮಿಯನ್ನು